ಹಾಪ್ ಕಾಮ್ಸ್ ನೌಕರರನ್ನು ಖಾಯಂಗೊಳಿಸುವುದು

60 (98) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ರಾಜ್ಯದಲ್ಲಿ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ:ಎಷ್ಟು?

2. ಅಷ್ಟರಲ್ಲಿ ಖಾಯಂ ಆಗಬೇಕಾಗಿರುವವರ ಸಂಖ್ಯೆ ಎಷ್ಟು?

3. ಖಾಯಂ ಮಾಡಬೇಕೆಂದು ಈ ನೌಕರರು ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಇವರನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು)

1. 576

2. 308

3. ಹೌದು

4. ಸಂಘದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರ ನಿಯಮಗಳನ್ವಯ ಮನವಿಯನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಎಂ. ಶಂಕರಲಿಂಗೇಗೌಡ:- ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿದೆ. ಅದರಲ್ಲಿ ಹೌದು ಎಂದು ಹೇಳಿದ್ದಾರೆ. ಆದರೆ ಬಹುತೇಕ ಇರತಕ್ಕಂಥ 578 ಜನರಲ್ಲಿ 308 ಜನ ರೈತರ ಮಕ್ಕಳು. ವ್ಯವಸಾಯವನ್ನೇ ನಂಬಿರತಕ್ಕಂಥ ರೈತರ ಮಕ್ಕಳಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಕೊಟ್ಟಿದ್ದಾರೆ. ಅವರ ಪರಿಸ್ಥಿತಿ ಏನಾಗಿದೆ ಅಂದರೆ ಅವರು ತಮ್ಮ ತಂದೆ ತಾಯಿಗಳಿಗೆ ಜೀವನ ಮಾಡಲು ದುಡ್ಡು ಕಳುಹಿಸಿಕೊಡುವುದಕ್ಕೂ ಆಗುತ್ತಿಲ್ಲ, ಈ ಕಡೆ ಅವರು ವ್ಯವಸಾಯ ಮಾಡಿ ಜೀವನ ಮಾಡುವುದಕ್ಕೂ ಆಗುತ್ತಿಲ್ಲ. ಈಗ ಎನು 308 ಜನ ಇದ್ದಾರೆ ಅವರನ್ನು ಖಾಯಂ ಮಾಡಿದರೆ ಆ 308 ಜನರಿಗೆ ಜೀವನ ಸಾಗಿಸಲು ಒಂದು ಆಶ್ರಯ ಕೊಟ್ಟಂತೆ ಆಗುವುದಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ಇದು ಸರ್ಕಾರಿ ಸಂಸ್ಥೆಯಲ್ಲ. ಇದು ಸಹಕಾರಿ ಸಂಸ್ಥೆ. ಈ ಸಹಕಾರಿ ಸಂಸ್ಥೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಾಗಲೇ ನಾವು ದಿನಗೂಲಿ ಆಧಾರದ ಮೇಲೆ ನಾವು ತೆಗೆದುಕೊಂಡಿದ್ದೇವೆಯೇ ಹೊರತು, ಪರ್ಮನೆಂಟ್ ಕೆಲಸಕೊಡುತ್ತೇವೆಂದು ತೆಗೆದುಕೊಂಡಿಲ್ಲ, ಅದು ಸಾಧ್ಯವೂ ಇಲ್ಲ. ಹಾಪ್‌ಕಾಮ್ಸ್ ಸಂಸ್ಥೆ ಹೆಚ್ಚು ಲಾಭಗಳಿಸುತ್ತಿದ್ದರೂ ಕೂಡ ಹೆಚ್ಚು ಖರ್ಚು ಇವರ ಸಂಬಳಕೋಸ್ಕರ ಆಗುತ್ತಿದೆ. ಎಲ್ಲಿ 3

ಪರ್ಸೆಂಟ್ 6 ಪರ್ಸೆಂಟ್ ಸಿಬ್ಬಂದಿ ವೆಚ್ಚ ಇರಬೇಕೋ ಅಲ್ಲಿ ಮತ್ತು 14 ಪರ್ಸೆಂಟ್ ಸಿಬ್ಬಂದಿ ವೆಚ್ಚ ಇದೆ. ಅದ್ದರಿಂದ ಇವರನ್ನು ಖಾಯಂ ಮಾಡಲು ಕಷ್ಟವಾಗುತ್ತದೆ. ಹೆಚ್ಚು ಸಂಬಳ ಕೊಡುವುದಕ್ಕೂ ಸಹ ಕಷ್ಟವಾಗುತ್ತದೆ. ಅವರಿಗೆ ಏನಾದರೂ ತೊಂದರೆ ಆದರೆ ಅವರು ಬಿಟ್ಟು ಹೋಗಬಹುದು. ಇದು ಸಹಕಾರಿ ಸಂಸ್ಥೆ ಅವರು ಹೆಚ್ಚು ಲಾಭ ಮಾಡಿದರೆ ಮಾಡಬಹುದು ಅಷ್ಟೇ.

ಶ್ರೀ ಎಂ. ಶಂಕರ್ ಲಿಂಗೇಗೌಡ:- ಮಾನ್ಯ ಅಧ್ಯಕ್ಷರೇ, ತಮಗೆ ಯಾರ್ಯಾರು ಬೇಕೋ ಅವರನ್ನು ಖಾಯಂ ಮಾಡಬಹುದು, ಉಳಿದವರನ್ನು ಖಾಯಂ ಮಾಡುವಾಗ, ಉಳಿದ ಜನಾಂಗದವರು ಇದ್ದರೆ ಅವರನ್ನು ಕೈ ಬಿಟ್ಟುಬಿಡುವುದೋ? ಇದು ಸರಿಯೇ? ಈಗ ತಾವು 300 ಜನರನ್ನು ಖಾಯಂ ಮಾಡಿದ್ದೀರಿ ಅವರನ್ನು ಖಾಯಂ ಮಾಡುವಾಗ ಕಷ್ಟ ಇಲ್ಲ, ಈ 300 ಜನರನ್ನು ಖಾಯಂ ಮಾಡುವಾಗ ಕಷ್ಟ ಆಗುತ್ತದೆ. ಇದು ಯಾವ ನ್ಯಾಯ? ಇದು ತಾರತಮ್ಯ ಅಲ್ಲವೇ?

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ 396 ಮಳಿಗೆಗಳು ಇವೆ. ಒಂದು ಮಳಿಗೆಗೆ ಇಬ್ಬರು ಅಂದರೂ ಕೂಡ ಸುಮಾರು 700 ಜನ ಬರುತ್ತಾರೆ. ಇಲ್ಲಿ ಈಗ 1308 ಜನ ಇದ್ದಾರೆ. ಅಗತ್ಯಕ್ಕಿಂತ ಹೆಚ್ಚು ಜನ ಇದ್ದಾರೆ. ಇರುವ ಜನರನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇಲ್ಲಿ ಅಂದರೆ ಇಡೀ ಸಂಸ್ಥೆಯನ್ನು ನಾವು ಮುಚ್ಚ ಬೇಕಾಗುತ್ತದೆ. ಇವತ್ತು ನಾವು ಎಲ್ಲರನ್ನೂ ಖಾಯಂ ಮಾಡುತ್ತಾ ಹೋದರೆ ಈ ಸಂಸ್ಥೆ ಮುಳಗಿ ಹೋಗುತ್ತದೆ. ಆಗ ಎಲ್ಲರಿಗೂ ಕೆಲಸ ಇಲ್ಲದಂತ ಆಗುತ್ತದೆ. ಆ ಸಂಸ್ಥೆ ಬೆಳೆಯಬೇಕು ಆ ಸಂಸ್ಥೆ ಉಳಿಯಬೇಕು ಎನ್ನುವ ದೃಷ್ಟಿಯಿಂದ ನಾವು ಇಟ್ಟುಕೊಂಡಿದ್ದೇವೆ. ಈಗಾಗಲೇ ನಾವು ಈ ಬಗ್ಗೆ 200 ಜನರನ್ನು ಖಾಯಂ ಮಾಡಲು ಸಹಕಾರಿ ನಿಬಂಧಕರಿಗೆ ಕೇಳಿದ್ದೇವೆ. ಅವರು ಅನುಮತಿ ಕೊಟ್ಟರೆ ನಮಗೆ ಕಷ್ಟವಾದರೂ ಚಿಂತೆ ಇಲ್ಲ, ಆಗ ನೀವು ಕೇಳಿದ ಪ್ರಶ್ನೆಗೆ ಉತ್ತರ ಸಿಗಬಹುದು ಎಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡ:- ಮಾನ್ಯ ಅಧ್ಯಕ್ಷರೇ ಸಂಸ್ಥೆ ಬೆಳೆಯಲಿ ಅಲ್ಲಿ ಕೆಲಸ ಮಾಡುವಂತಹವರನ್ನು ಉಳಿಸಿ. ಅವರಿಗೆ ತೊಂದರೆ ಮಾಡುವುದಕ್ಕೆ ಹೋಗಬೇಡಿ. ಅವರು ಎಲ್ಲಾ ಬಡ ರೈತರ ಮಕ್ಕಳು. ಅವರು ತಂದೆ ತಾಯಿಗಳಿಗೆ ಅನ್ನು ಹಾಕುವುದಕ್ಕಾಗಿ ಕಾಡಿಬೇಡಿ ಕೆಲಸ ತೆಗೆದುಕೊಂಡಿದ್ದಾರೆ ಈ ಮೊದಲು 308 ಜನರನ್ನು ಖಾಯಂ ಮಾಡಿದ್ದೀರಿ, ಇನ್ನು ಉಳಿದವರನ್ನು ಏಕೆ ಮಾಡುತ್ತಿಲ್ಲ ಅವರನ್ನು ಸಹ ಖಾಯಂ ಮಾಡುವುದು ಅನಿವಾರ್ಯವಾಗುತ್ತದೆ. ತಾವು ಅವರನ್ನು ಬಿಟ್ಟುಹೋಗಿ ಎಂದು ಹೇಳುವುದು ಎಷ್ಟು ಸುಲಭ. ಅವರು 5-6 ವರ್ಷ ಈಗಾಗಲೇ ಕೆಲಸಮಾಡಿದ್ದಾರೆ.

ಶ್ರೀ ಡಿ.ಟಿ ಜಯಕುಮಾರ್:- ಮಾನ್ಯ ಸದಸ್ಯರ ಕಳಕಳಿ ನಮಗೆ ಅರ್ಥವಾಗಿದೆ. ಆ ಸಂಸ್ಥೆ ಹೆಚ್ಚು ಲಾಭ ಪಡೆಯುವಂತಾದರೆ ಆಗ ನಾವು ಎಲ್ಲರನ್ನು ಖಾಯಂ ಮಾಡತಕ್ಕಂಥ ಸ್ಥಿತಿಗೆ ನಾವು ಬಂದರೆ ಖಂಡಿತ ಮಾಡಿಕೊಡುತ್ತೇವೆಂದು ನಾನು ಹೇಳುತ್ತೇನೆ.